(ii) Notice of Adjournment Motion *re*: Statement of the Chief Minister of Tamil Nadu in respect of Transfer of Talawadi

†ಶ್ರೀ ವಾಟಾಳ್ ನಾಗರಾಜ್ (ಚಿಕ್ಕಜೇಜೆ).—ನಾನು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿದ್ದೆ. ಮೊನ್ನೆ ದಿನ ಇದೇ ಸಭೆಯಲ್ಲಿ ತಾಳವಾಡಿ ಫಿರ್ಕಾವನ್ನು ಕರ್ನಾಟಕಕ್ಕೆ ಸೇರಿಸಬೇಕು ಎನ್ನುವ ಸೂಚನೆ ಬಂದು ಚರ್ಚೆ ನಡೆದಾಗ ಮದ್ರಾಸ್ ಅಸೆಂಬ್ಲಿಯಲ್ಲಿ ಕೂಡ ಇದೇ ವಿಷಯ ಬಂದಿದೆ. ಆಗ ಅಲ್ಲಿನ ಮುಖ್ಯ ಮಂತ್ರಿಯವರು ಒಂದು ಮಾತನ್ನು ಹೇಳಿದ್ದಾರೆ. ಹೊರ ಗಡೆಯಿಂದ ಪ್ರಚೋದನೆ ಮಾಡತಕ್ಕ ಜನ ತಾಳವಾಡಿಯೊಳಗೆ ಬಂದು ಅಲ್ಲಿನ ಜನತೆಯನ್ನು ಪ್ರಚೋದನೆ ಮಾಡುತ್ತಿದ್ದರೆ ನಮ್ಮ ಸರ್ಕಾರವಿದೆ, ನಾವು ಅವರನ್ನು ಬಿಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಬಿಡುವ, ಇಟ್ಟುಕೊಳ್ಳುವ ಪ್ರಶ್ನೆ ಅವರಿಗೆ ಸೇರಿದ್ದು. 28ನೇ ತಾರೀಖು ಅಲ್ಲಿ ಬಹಳ ಕ್ರಮವಾಗಿ ಸೌಜನ್ಯ ರೀತಿಯಿಂದ ಮೆರವಣಿಗೆ ಮುಂತಾದುವನ್ನು ನಡೆಸಬೇಕೆಂದು ಉದ್ದೇಶ ಕನ್ನಡ ಚಳುವಳಿಗಾರರಿಗೆ ಇತ್ತು. ನಾವಾಗಿಯೇ ತಾಳವಾಡಿ ಊರೊಳಗೆ ಹೋಗಿ ಅಲ್ಲಿನ ಜನತೆಯನ್ನು ಪ್ರಚೋದನೆ ಮಾಡಿ, ನೀವೆಲ್ಲ ಬಂದೇ ಬರಬೇಕು ಎಂದು ಮನಸ್ಸಿಲ್ಲದ ಮನುಷ್ಯ ರೊಂದಿಗೆ ಮಾತನಾಡಿಲ್ಲ. ನಾವು ಅಲ್ಲಿ ಹೋಗಿ ಪರಿಸ್ಥಿತಿಯನ್ನು ನೋಡಿದಾಗ ತಾಳವಾಡಿ ಭಾಗದ 50 ಸಾವಿರ ಕನ್ನಡ ಜನ 10 ಗ್ರೂಪ್ ಪಂಚಾಯತಿಗಳ ಅಧ್ಯಕ್ಷರು ಸೇರಿ ನಮ್ಮನ್ನು ಆಹ್ವಾನ ಮಾಡಿ ಈ ಪ್ರಶ್ನೆ ಸಂಬಂಧದಲ್ಲಿ ಸುಮಾರು 13 ವರ್ಷದಿಂದಲೂ ಅನೇಕ ವಿಧದಲ್ಲಿ ಬೇಡಿಕೆ ಯನ್ನು ಸಲ್ಲಿಸಿದಾಗ್ಯೂ ಆ ಬೇಡಿಕೆಗೆ ಕಿವಿ ಕೊಟ್ಟಿರಲಿಲ್ಲ. ಆದುದರಿಂದ ಮದ್ರಾಸ್ ಸರ್ಕಾರದಿಂದ ತಾಳವಾಡಿಯ ವಿಮೋಚನೆ ಮಾಡಿ ನಮಗೆ ಸರಿಯಾದ ಮಾರ್ಗವನ್ನು ಕಲ್ಪಿಸಬೇಕೆಂದು ಅಲ್ಲಿಯ ಜನ ಬಹಳ ಒತ್ತಾಯದಿಂದ ಬರೆದರು. ಆ ಭಾಗಕ್ಕೆ ಬಹಳ ಹತ್ತಿರವಾಗಿರುವವರು ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು. ಈ ವಿಚಾರವನ್ನು ಅವರು ನಮಗೆ ಬರೆದಾಗ ನಮ್ಮನ್ನು ಬಂದು ಕರೆದಾಗ ಆ ಜನ ಬಂದು ಒತ್ತಾಯ ಮಾಡಿದಾಗ ನಾವು ಹೋಗಿ ಅಲ್ಲಿರತಕ್ಕ ಕನ್ನಡಿಗರಿಗೆ ರಕ್ಷಣೆ ಕೊಡುವುದು ಗೊಂದಲವಾಯಿತೇ? ಮದ್ರಾಸ್ ರಾಜ್ಯದ ಮುಖ್ಯ ಮಂತ್ರಿಯವರಾದ ಕರುಣಾನಿಧಿಯವರು ಪ್ರಜಾಪ್ರಭುತ್ವವನ್ನು ಅರಿಯದೆ ಮದ್ರಾಸ್ ರಾಜ್ಯ ಎನ್ನುವುದು ಕೇವಲ ತಮ್ಮದೇ ಆದ ಪಾಳೆ ಗಾರಿಕೆ, ಅಲ್ಲಿ ಯಾರೂ ಬರಬಾರದು ಎಂದು ಹೇಳಿರುವುದು ಅವರ ಅಂತಸ್ತಿಗೆ ಧಕ್ಕೆ ತರುವಂತಹ ವಿಚಾರ ಎಂದು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಅಲ್ಲಿರುವ ನೂರಕ್ಕೆ ನೂರು ಜನ ಕನ್ನಡಿಗರು ನಮ್ಮನ್ನು ಬರಹೇಳಿದ್ದರಿಂದ ನಾವು ಅಲ್ಲಿಗೆ ಹೋಗಬೇಕಾದ ಪ್ರಸಂಗ ಬಂದಿದೆ. ಅದಕ್ಕಾಗಿ ಹೋಗುತ್ತ ಇದ್ದೇವೆ. ಈಗಾಗಲೇ ಅಲ್ಲಿರುವ ಜನ ಯಾವ ದೃಷ್ಟಿಯಿಂದ ಬೇರೆಯವರನ್ನು ಕರೆ ಯುತ್ತಾರೆ, ಯಾವರೀತಿ ಕರೆಯುತ್ತಾರೆ ಎನ್ನುವ ರೀತಿಯಿಂದ ಅಲ್ಲಿಗೆ ಪೋಲೀಸರನ್ನು ಕಳುಹಿಸಿ ದ್ದಾರೆ. ಅಲ್ಲಿರತಕ್ಕ ಕನ್ನಡಿಗರಿಗೆ ತೊಂದರೆ ಕೊಡುತ್ತಿದ್ದಾರೆ. ಅಲ್ಲಿ ಒಂದು ಪರ್ಸೆಂಟ್ ಕೂಡ ತಮಿಳು ಭಾಷೆಯನ್ನಾಡುವ ಜನರಿಲ್ಲ. ನೂರಕ್ಕೆ ನೂರು ಭಾಗ ಕನ್ನಡಿಗರಿರತಕ್ಕ ಆ ಪ್ರದೇಶವನ್ನು ಸೌಜನ್ಯದಿಂದ ಕರ್ನಾಟಕಕ್ಕೆ ಕೊಡಿ ಎನ್ನುವ ಉದ್ದೇಶ ನಮಗಿದಿಯೇ ಹೊರತು ಬೇರೆ ಯಾವ ರೀತಿಯ ಉದ್ದೇಶವೂ ಇಲ್ಲ. ಈ ಉದ್ದೇಶವನ್ನು ಅರಿತುಕೊಳ್ಳದೆ ಯಾವುದೋ ರಾಜಕೀಯ ದೃಷ್ಟಿಯಿಂದ ಅಲ್ಲಿಗೆ ಬರುವವರನ್ನು ಬಿಡುವುದಿಲ್ಲ, ನೋಡುತ್ತೇವೆ ಎನ್ನುವ ಉದ್ಧಟತನದ ಗೂಂಡಾಗಿರಿಯ ಮಾತನ್ನಾಡಿದ್ದಾರೆ. ಅದು ನಿಜವಾಗಿಯೂ ಬಹಳ.....

Mr. SPEAKER.—Hon. Member cannot refer to the Hon. Chief Minister as "goonda." It is not correct. The word "goondagiri" should not have been used against the Chief Minister.

ಶ್ರೀ ವಾಟಾಳ್ ನಾಗರಾಜ್.—ಯಾವುದೊಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಯಾರೂ ಬರುವ ಹಾಗೆ ಇಲ್ಲ ಎಂದು ಹೇಳಿದ ಹಾಗೆ ಆಗುತ್ತದೆ. ಕರುಣಾನಿಧಿಯವರು ಬೆಂಗಳೂರಿಗೆ ಮೂರು ಸಲ ಬಂದು ಹೋಗಿ ಇಲ್ಲಿಯ ಅವರ ಡಿ. ಎಂ. ಕೆ. ರಾಜಕೀಯ ಪಕ್ಷದಲ್ಲಿ ಪ್ರಚೋದನೆ ಮಾಡಿದ್ದಾರೆ. ಹಾಗಾದರೆ ಕರುಣಾನಿಧಿಯವರು ಬೆಂಗಳೂರಿಗೆ ಬರಬಾರದು ಎಂದು ಹೇಳುವ ಮಟ್ಟಕ್ಕೆ ಅವರಿಗೆ ಎಚ್ಚರಿಕೆ ಕೊಡಬೇಕಾಗುತ್ತದೆ. ನಮ್ಮ ಸರಕಾರವು ಮೂಲಕ ತಮ್ಮ ಮೂಲಕ ಕೇಂದ್ರ ಸರಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ, ತಾಳವಾಡಿಯಲ್ಲಿ ಜನತೆಗೆ ತೊಂದರೆ ಕೊಡುತ್ತಾ ಇದ್ದಾರೆ. ಅಲ್ಲಿಗೆ ಪೋಲೀಸರನ್ನು ಕಳಿಸಿದ್ದಾರೆ, ಪಂಚಾಯತಿ ಅಧ್ಯಕ್ಷರನ್ನು ಕರೆಸಿ ಮಾತ ನಾಡುತ್ತಿದ್ದಾರೆ. ಇಂಥ ಕರುಳಿಗೆ ತಪ್ಪಿಸುವುದಕ್ಕೆ ಕೇಂದ್ರ ಸರಕಾರ ಹಾಗು ಗೃಹ ಮಂತ್ರಿಗಳು ಪತ್ರವ್ಯವಹಾರ ನಡೆಸಿ ಒಳ್ಳೆಯ ವಾತಾವರಣ ಕಲ್ಪಿಸಿ ತಾಳವಾಡಿಯನ್ನು ಕರ್ನಾಟಕಕ್ಕೆ ಕೊಡುವ ರೀತಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

Mr. SPEAKER.—The Hon. Member has given notice of an adjournment motion on the statement made by the Chief Minister of Tamil Nadu the other day. It is not correct to make any reference to the proceedings of another sister Assembly, much less to comment on it. It is also not correct for the hon. Member to use the expression " goondagiri " with respect to the Chief Minister of Tamil Nadu. Likewise if a statement were to be made by a Minister in this House, it is also not proper for any member in the Tamil Nadu Assembly to make comments on it.

ಶ್ರೀ ವಾಟಾಳ್ ನಾಗರಾಜ್.—ಬೇಜವಾಬ್ದಾರಿ ರಾಜಕಾರಣಿಗಳು ಎಂದು ಹೇಳಬಹುದಲ್ಲವೇ ?

Mr. SPEAKER.—Even that is not correct. It is not proper to make such comments. Since it is not proper to raise an adjournment motion on the statement alleged to have been made by the Chief Minister of Tamil Nadu in the Tamil Nadu Assembly, I cannot allow such a motion and, therefore, this motion is disallowed.

ಶ್ರೀ ಎಸ್. ಗೋಪಾಲ ಗೌಡ.—ಒಂದು ಕ್ಲಾರಿಫಿಕೇಷನ್ ಕೇಳಬೇಕಾಗಿದೆ, ಸ್ವಾಮಿ.

Mr. SPEAKER.—Since the motion is disallowed, nothing need be said about it now. I want to inform hon. Members that if they want any matter to be discussed which is not in the list of business, they should do so only after obtaining prior consent of the Presiding Officer. Members should give notice of it at least one or two hours before the commencement of the sitting so that I may apply my mind. Where the subject raised requires some reply by the Government, they should be given some time to reply. Therefore, if any Member wants to raise any matter which is not nor the agenda, he should give notice of it in writing at least two hours before the commencement of the sitting.

ಶ್ರೀ ಎಸ್. ಗೋಪಾಲಗೌಡ.—ತಮ್ಮ ಅನುಮತಿ ಪಡೆದು ಒಂದು ಪ್ರಶ್ನೆ ಕೇಳುತ್ತೇನೆ. ತಾವು ಹೇಳಿದ ಪ್ರಕಾರ ಅಡ್ಜರ್ನ್‌ಮೆಂಟ್ ಮೋಷನ್ ಡಿಸ್ ಅಲೌ ಮಾಡಿದ್ದೀರಿ. ನಾನು ಕೇಳುವ ವಿಷಯದ ಬಗ್ಗೆ ನೋಟೀಸ್ ಕೊಟ್ಟಿಲ್ಲ. ತಾವು ಪತ್ರಿಕೆಯಲ್ಲಿ ಓದಿದ ಹಾಗೆ ನಾನೂ ಪತ್ರಿಕೆಯಲ್ಲಿ ಓದಿದ್ದೇನೆ. ಮಾನ್ಯ ಸದಸ್ಯರು ಒಬ್ಬರು ಇಂಥ ವಿಷಯ ಸಭೆಯಲ್ಲಿ ಎತ್ತ ಬೇಕಾದರೆ ಇದು ನಿಲುವಳಿ ಸೂಚನೆಯಾಗುವುದಿಲ್ಲ ಎಂದು ಹೇಳುತ್ತೀರಿ. ಇನ್ನೊಂದು, ವಿಧಾನ ಸಭೆಯಲ್ಲಿ ಆ ರಾಜ್ಯದ ಮುಖ್ಯ ಮಂತ್ರಿಗಳು ಅಲ್ಲಿ ಹೇಳಿದ್ದು ಈ ನಮ್ಮ ಸಭೆಯಲ್ಲಿ ಅದು ನಿಲುವಳಿ ಸೂಚನೆಯಾಗುವುದಿಲ್ಲ ಎನ್ನುವುದು ತಮ್ಮ ಅಭಿಪ್ರಾಯ. ಒಂದು ರಾಜ್ಯದ ಮುಖ್ಯಮಂತ್ರಿಗಳು ಯಾರಾದರೂ ಅಲ್ಲಿಯ ಮಾನ್ಯ ಸಭೆ ಒಳಗಡೆ ಕರ್ನಾಟಕ ರಾಜ್ಯದ ಮೇಲೆ ದಂಡಯಾತ್ರೆ ಕೈಕೊಳ್ಳಬೇಕು ಎಂದು ಒಂದು ನಿರ್ಣಯ ಪಾಸು ಮಾಡುತ್ತಾರೆ ಎಂದು ಇಟ್ಟುಕೊಳ್ಳೋಣ. ಆಗ ಈ ಸಭೆಗೆ ಅವನ್ನು ಚರ್ಚೆ ಮಾಡುವ ಹಕ್ಕು, ನಿಲುವಳಿ ಸೂಚನೆ ತರುವ ಹಕ್ಕು ಬರುತ್ತದೋ ಇಲ್ಲವೋ ಎನ್ನುವ ಹೈಪೋಥಟಿಕಲ್ ಪ್ರಶ್ನೆ ತಿಳಿದುಕೊಳ್ಳಲು ನಾನು ಇಷ್ಟ ಪಡುತ್ತೇನೆ.

Mr. SPEAKER.—I understand the problem raised by the hon. Member. It is better that I should not give any ruling on hypothetical question. If and when such question arises, I will apply my mind seriously and study the whole thing and then give my ruling.